# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1196 |
| 2 | ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 19-12-2024 |
| 4 | ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಅಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಅಳವಡಿಸಲು ಬಿಬಿಎಂಪಿಯ ಅನುಮತಿ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ ಅನುಮತಿ ನೀಡುವ ಸಂದರ್ಭದಲ್ಲಿ ಪಾಲಿಕೆ ಅನುಸರಿಸುತ್ತಿರುವ ನೀತಿ ನಿಯಮಗಳೇನು; | • ಹೌದು.<br>• ಅನುಮತಿ ನೀಡುವ ಸಂದರ್ಭದಲ್ಲಿ ಅನುಸರಿಸುವ ಓ.ಎಫ್.ಸಿ ನಿಗದಿತ ಸಾಮಾನ್ಯ ಕಾರ್ಯವಿಧಾನದ ಪ್ರತಿ **ಅನುಬಂಧ-ಎ** ರಲ್ಲಿ ಒದಗಿಸಿದೆ. |
| ಆ) | ಕೇಬಲ್ ವೈರ್ ಮತ್ತು ಭೂಮಿಯನ್ನು ಅಗೆದು ಹಾಕಲಾಗುವ ಕೇಬಲ್‌ಗಳಿಂದ ಪಾಲಿಕೆಗೆ ಇದುವರೆಗೂ ಎಷ್ಟು ಹಣ ಸಂದಾಯವಾಗಿದೆ, (ಸಂದಾಯ ಮಾಡಿರುವ ಕಂಪನಿಯ ಹೆಸರು ಮತ್ತು ಮೊತ್ತದ ವಿವರ ನೀಡುವುದು) | ಓ.ಎಫ್.ಸಿ ಆರಂಭವಾದಾಗಿನಿಂದ ತಹಲ್‌ವರೆಗೆ ಪಡೆದಿರುವ ಶುಲ್ಕಗಳ ವಿವರಗಳನ್ನು **ಅನುಬಂಧ-ಬಿ ರಲ್ಲಿ ಒದಗಿಸಿದೆ.** |
| ಇ) | 2019 ರಂದು ಬಿಬಿಎಂಪಿ ಆಯುಕ್ತರು ಹೊರಡಿಸಿದ್ದ ಆದೇಶದಲ್ಲಿ ನಿಗಧಿಪಡಿಸಿರುವ ಶುಲ್ಕಕ್ಕಿಂತ ಕಡಿಮೆ ಶುಲ್ಕ ವಸೂಲಿ ಮಾಡಿರುವುದರಿಂದ ಮೂರು ವರ್ಷಗಳ ಅವಧಿಯಲ್ಲಿ ಪಾಲಿಕೆಗೆ ಸುಮಾರು 86.65 ಕೋಟಿ ರೂ. ನಷ್ಟವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ; (ಆದೇಶದ ಪ್ರತಿ ಒದಗಿಸುವುದು) | • ಸದರಿ ಆಕ್ಷೇಪಣೆಯು 2019-20ನೇ, 2020-21ನೇ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿನ ಆಕ್ಷೇಪಣೆಯಾಗಿರುತ್ತದೆ:<br><br>**ಕ್ರ ಸಂ. \| ವರ್ಷ \| ಜಿ.ಎಸ್.ಟಿ ಮೊತ್ತ ರೂ**<br>1) \| 2019-20 \| 4,45,19,942-00<br>2) \| 2020-21 \| 31,17,89,707-00<br>3) \| 2021-22 \| 51,02,03,296-00<br>**ಒಟ್ಟು ಮೊತ್ತ ರೂ \| 86,65,12,945-00**<br><br>• ಈ ಹಿಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸುವ ಕಾಮಗಾರಿಗೆ ಅನುಮತಿಯನ್ನು ದಿನಾಂಕ: 17.09.2018ರ ಆಯುಕ್ತರ ಆದೇಶದಂತೆ ಭದ್ರತಾ ಠೇವಣಿ ಶುಲ್ಕಗಳನ್ನು 150/- ರೂ.ಗಳಂತೆ ಪಾಲಿಕೆಗೆ ಪಾವತಿಸಿಕೊಂಡು ಗುಂಡಿಗಳ ಮುಖಾಂತರ ಕೇಬಲ್ ಅಳವಡಿಸಲು ಅನುಮತಿ ನೀಡಲಾಗುತ್ತಿತ್ತು. ಸದರಿ ಗುಂಡಿಗಳನ್ನು ಪುನಶ್ಚೇತನಗೊಳಿಸಿದ ನಂತರ ಹಾಗೂ ಡಿ.ಎಲ್.ಪಿ ಅವಧಿಯ ಅನುಸಾರ ಸೇವಾ ಸಂಸ್ಥೆಯವರಿಗೆ ಇದನ್ನು ಹಿಂದಿರುಗಿಸಲಾಗುತ್ತಿತ್ತು. ಪ್ರಸ್ತುತ ಮುಖ್ಯ ಆಯುಕ್ತರ ದಿನಾಂಕ: 29-11-2019ರ ಆದೇಶದಂತೆ ಭದ್ರತಾ ಠೇವಣಿಯನ್ನು ಪಾವತಿಸಿಕೊಳ್ಳಲಾಗುತ್ತಿದ್ದು, ಸದರಿ ಅದೇಶದಲ್ಲಿ ರಸ್ತೆ ಪುನಶ್ಚೇತನ ಶುಲ್ಕವನ್ನು 130/- ರೂ.ಗಳಲ್ಲಿ ನಿಗಧಿಪಡಿಸಿದ್ದು, ಭದ್ರತಾ ಠೇವಣಿಯನ್ನು 50/- ರೂ. ಗಳಿಗೆ ಇಳಿಸಿ ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ. |

| | | |
|---|---|---|
| | | • ಪ್ರಸ್ತುತ ಓ.ಎಫ್.ಸಿ ಕೇಬಲ್ ಅಳವಡಿಕೆಗೆ ಪಾಲಿಕೆಯಲ್ಲಿ ಚಾಲ್ತಿಯಲ್ಲಿರುವ ದಿನಾಂಕ: 29-11-2019ರ ಆಯುಕ್ತರ ಆದೇಶವನ್ನು ಪರಿಗಣಿಸದೇ ಹಿಂದಿನ ದಿನಾಂಕ: 17-09-2018ರ ಆದೇಶವನ್ನು ಪರಿಗಣಿಸಿ ಆಡಿಟ್ ಅಧಿಕಾರಿಗಳು ಆಕ್ಷೇಪಣೆಯನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ. ಸದರಿ ಆಕ್ಷೇಪಣೆಯ ಕಂಡಿಕೆಗಳಿಗೆ ವಿವರಣೆಯನ್ನು ಈಗಾಗಲೇ ಮುಖ್ಯ ಲೆಕ್ಕಾಧಿಕಾರಿಗಳಿಗೆ ಬಿಬಿಎಂಪಿ ಕಛೇರಿಯಿಂದ ಸಲ್ಲಿಸಲಾಗಿರುತ್ತದೆ. ಮೇಲಿನ ಅಂಶಗಳನ್ವಯ ಪಾಲಿಕೆಗೆ ಯಾವುದೇ ನಷ್ಟವಾಗದಂತೆ ಆಯುಕ್ತರ ಆದೇಶದ ಅನುಸಾರ ಅನುಮತಿಯನ್ನು ನೀಡಲಾಗುತ್ತಿದೆ. |
| ಈ) | ಇತ್ತೀಚೆಗೆ ನಗರದ ಎಲ್ಲಾ ವಿದ್ಯುತ್ ಕಂಬ ಹಾಗೂ ಮನೆಗಳ ಮಹಡಿಗಳ ಮೇಲೆ ಅನಧಿಕೃತವಾಗಿ ಕೇಬಲ್ ವೈರ್ ಗಳನ್ನು ಹಾಕಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ; | ನಗರದ ರಸ್ತೆ ಬದಿಯ ವಿದ್ಯುತ್ ಕಂಬಗಳು, ಮನೆಗಳ ಮಹಡಿಗಳ ಮೇಲೆ ಹಾಗೂ ಮರಗಳಲ್ಲಿ ಹಾದು ಹೋಗಿರುವ ಅನಧಿಕೃತ ಕೇಬಲ್ ವೈರ್‌ಗಳನ್ನು ವಾರ್ಡ್‌ವಾರು ಪರಿಮಿತಿಯಲ್ಲಿ ಕಾಲಕಾಲಕ್ಕೆ ತೆಗೆದುಹಾಕಲು ಕ್ರಮವಹಿಸಲಾಗುತ್ತಿದೆ. |
| ಉ) | ಬಂದಿದ್ದಲ್ಲಿ ನಗರದ ಎಲ್ಲಾ ಭಾಗಗಳಲ್ಲೂ ಕೇಬಲ್ ವೈರ್‌ಗಳು ನೇತಾಡುತ್ತಿರುವುದನ್ನು ಅಧಿಕಾರಿಗಳು ಗಮನಹರಿಸಲಿಲ್ಲವೇ; ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಗಳಿಗೆ ಕೇಬಲ್‌ಗಳು ನೇತಾಡುತ್ತಿರುವುದರಿಂದ ನಗರದ ಸೌಂದರ್ಯಕ್ಕೆ ಹಾಗೂ ಜೀವಗಳಿಗೆ ಮಾರಣಾಂತಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಊ) | ರಸ್ತೆಗಳನ್ನು ಅಗೆದು ಹಾಕಲಾಗುತ್ತಿರುವ ಕೇಬಲ್‌ಗಳನ್ನು ಅಳವಡಿಸಿದ ನಂತರ ಅಗೆದಿರುವ ರಸ್ತೆಗಳನ್ನು ಮುಚ್ಚಬೇಕಾಗಿರುವ ಜವಾಬ್ದಾರಿ ಯಾರದ್ದು; ಹಲವಾರು ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಹಾಗೂ ಡಾಂಬರನ್ನು ಸಹ ಹಾಕಿಲ್ಲದಿರುವುದರಿಂದ ಇದರ ಪರಿಶೀಲನೆಯ ಜವಾಬ್ದಾರಿ ಯಾವ ಅಧಿಕಾರಿಯದ್ದು. | • ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ಎಚ್.ಡಿ.ಡಿ ಮಾದರಿಯಲ್ಲಿ ಅನುಮತಿ ನೀಡಲಾಗುತ್ತಿದ್ದು, ಓಪನ್ ಟ್ರೆಂಚ್ ಮೋಟರಬಲ್ ಮಾದರಿಯಲ್ಲಿ ಕೇಬಲ್ ಅಳವಡಿಸಲು ಅನುಮತಿ ನೀಡುವುದಿಲ್ಲ.<br>• ಕೇಬಲ್‌ಗಳನ್ನು ಅಳವಡಿಸಿದ ನಂತರ ರಸ್ತೆಯನ್ನು ಮೋಟರಬಲ್ ಮಾಡುವುದು ಸೇವಾ ಸಂಸ್ಥೆಯವರ ಜವಾಬ್ದಾರಿಯಾಗಿರುತ್ತದೆ.<br>• ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಿದ ಗುಂಡಿಗಳನ್ನು ಡಾಂಬರಿಕರಣ ಮಾಡುವುದು ಬಿಬಿಎಂಪಿಯ ಜವಾಬ್ದಾರಿಯಾಗಿದ್ದು, ಬಿಬಿಎಂಪಿಗೆ ರಸ್ತೆ ಪುನಶ್ಚೇತನ ಶುಲ್ಕವನ್ನು ಸೇವಾ ಸಂಸ್ಥೆಯವರು ಪಾವತಿಸಿರುತ್ತಾರೆ.<br>• ಇದರ ಪರಿಶೀಲನೆಯನ್ನು ಸಂಬಂಧಪಟ್ಟ ವ್ಯಾಪ್ತಿಯ ಅಭಿಯಂತರರ ಜವಾಬ್ದಾರಿಯಾಗಿರುತ್ತದೆ. |

**ಸಂಖ್ಯೆ: ನಅಇ 896 ಎಂಎನ್‌ಯು 2024(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆ ಸಾಮಾನ್ಯ ನಿಗದಿತ ಕಾರ್ಯವಿಧಾನ

**ವಿಷಯ:** ಓ.ಎಫ್.ಸಿ ಅಳವಡಿಕೆ ಮನವಿಗಳನ್ನು ನಿರ್ವಹಿಸುವ ಪಾಲಿಕೆಯ ಜಿ.ಐ.ಎಸ್. ಜಾಲತಾಣದಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ಪ್ರಕ್ರಿಯೆ ಮತ್ತು ಅನಧಿಕೃತ ಓ.ಎಫ್.ಸಿ ಅಳವಡಿಕೆ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ

**ದಸ್ತಾವೇಜು ಸೃಜನೆ:** ಓ.ಎಫ್.ಸಿ. ವಿಭಾಗ

**ದಿನಾಂಕ:** 17-09-2019

**ದಸ್ತಾವೇಜು ಪರಿಶೀಲನೆ:** ವಿಶೇಷ ಆಯುಕ್ತರು (ಯೋಜನೆ)

**ದಿನಾಂಕ:** [illegible]

**ದಸ್ತಾವೇಜು** ಆಯುಕ್ತರು

**ಅನುಮೋದನೆ:** [illegible]

**ಅನುಮೋದಿಸಿದ ದಿನಾಂಕ:** [illegible] **ಆವೃತ್ತಿ:** 01

## 1. ಹಿನ್ನೆಲೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದೂರಸಂಪರ್ಕ, ವಿದ್ಯುಶ್ಚಕ್ತಿ ಮತ್ತು ಅಂತರ್ಜಾಲ ಸೇವೆಗಳನ್ನು ನೀಡುವ ಸಂಸ್ಥೆಗಳು ತಮ್ಮ ಜಾಲಗಳ ಸ್ಥಾಪನೆಗಾಗಿ ಭೂಗತ ಓ.ಎಫ್.ಸಿ ಅಳವಡಿಕೆಯನ್ನು ಕೈಗೊಳ್ಳುತ್ತವೆ. ಸದರಿ ಓ.ಎಫ್.ಸಿ. ಅಳವಡಿಕೆಗಾಗಿ ಕೆ.ಎಂ.ಸಿ ಕಾಯ್ದೆಯಲ್ಲಿ ಪ್ರದತ್ತವಾದ ಅಧಿಕಾರಾನ್ವಯ ಪಾಲಿಕೆ ಅನುಮತಿ ನೀಡುತ್ತಿದೆ. ಓ.ಎಫ್.ಸಿ. ಅಳವಡಿಕೆ ಅನುಮತಿ ಪ್ರಕ್ರಿಯೆಯನ್ನು ಪಾಲಿಕೆಯ ಜಾಲತಾಣದ ಮೂಲಕ ನಿರ್ವಹಿಸುತ್ತಿದ್ದರೂ ಬಹಳಷ್ಟು ಬಾರಿ ರಸ್ತೆಗಳನ್ನು ಮತ್ತು ಪಾದಚಾರಿ ಮಾರ್ಗಗಳನ್ನು ಅನುಮತಿಯಿಲ್ಲದೇ ಕತ್ತರಿಸಲಾಗುತ್ತದೆ. ಹೀಗೆ ಕತ್ತರಿಸಲ್ಪಟ್ಟ ರಸ್ತೆಗಳ ಪುನರ್ನಿರ್ಮಾಣವನ್ನು ಸದರಿ ಸಂಸ್ಥೆಗಳು ಕೈಗೊಂಡರೂ ಕೂಡ ಅಗತ್ಯವಿರುವ ಗುಣಮಟ್ಟದಲ್ಲಿ ಇಲ್ಲದಿರುವುದು ಸಾಮಾನ್ಯವಾಗಿದೆ. ಇದರಿಂದಾಗಿ ಹೊಸದಾಗಿ ಡಾಂಬರೀಕರಣ ಮಾಡಿದ ರಸ್ತೆಗಳು ಕೂಡ ಬಳಕೆಗೆ ಬರದೇ ಶೀಘ್ರವಾಗಿ ಹಾಳಾಗಿ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗುವುದು ವ್ಯಾಪಕವಾಗಿ ಕಂಡುಬರುತ್ತದೆ.

ಇಷ್ಟಲ್ಲದೇ ಪಾಲಿಕೆ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡಿ ಒಂದು ವರ್ಷದವರೆಗೆ ಯಾವುದೇ ರಸ್ತೆಗಳನ್ನು ಅಗೆಯುವುದನ್ನು ನಿರ್ಬಂಧಿಸಲಾಗಿದೆ. ಓ.ಎಫ್.ಸಿ. ಸಂಸ್ಥೆಗಳು ಕೆಲ ಸಂದರ್ಭಗಳಲ್ಲಿ ಪೂರ್ವಾನುಮತಿಯನ್ನು ಪಡೆದಿದ್ದರೂ ಕೂಡ ರಸ್ತೆಗಳ ಡಾಂಬರೀಕರಣ ಆಗುವವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಡಾಂಬರೀಕರಣ ಆದ ನಂತರ ಎಚ್ಚೆತ್ತು ಕಾಮಗಾರಿಗೋಸ್ಕರ ರಸ್ತೆ ಕತ್ತರಿಸಿ ಹಾಳುಗೆಡುವುತ್ತಿವೆ. ಅಲ್ಲದೇ ಓ.ಎಫ್.ಸಿ ಅಳವಡಿಕೆಯನ್ನು ಸಂಸ್ಥೆಗಳು ಮುಚ್ಚುಮರೆಯಿಂದ ರಾತ್ರಿ ಸಮಯದಲ್ಲಿ ಕೈಗೊಳ್ಳುತ್ತಿರುವುದರಿಂದ ಮತ್ತು ಅಪರಾಧಿಕ ಹಿನ್ನೆಲೆಯುಳ್ಳ ವ್ಯಕ್ತಿಗಳನ್ನು ಸದರಿ ಕೆಲಸದಲ್ಲಿ ಬಳಸಿಕೊಳ್ಳುತ್ತಿರುವುದರಿಂದ ಓ.ಎಫ್.ಸಿ. ಅಳವಡಿಕೆಯ ಪ್ರಕ್ರಿಯೆಯ ಬಗ್ಗೆ ಸಾರ್ವಜನಿಕರಲ್ಲಿ ಋಣಾತ್ಮಕ ಅಭಿಪ್ರಾಯ ಸ್ಥಿರಗೊಂಡಿದ್ದು, ಜನ ಪ್ರತಿನಿಧಿಗಳು ಮತ್ತು ಮಾಧ್ಯಮಗಳಿಂದ ವ್ಯಾಪಕ ಟೀಕೆ ಮತ್ತು ವಿರೋಧ ವ್ಯಕ್ತವಾಗಿರುತ್ತದೆ.



ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಈ ಹಿನ್ನೆಲೆಯಲ್ಲಿ ಓ.ಎಫ್.ಸಿ. ಅಳವಡಿಕೆ ಸಾಮಾನ್ಯ ನಿಗದಿತ ಕಾರ್ಯವಿಧಾನವನ್ನು ತಯಾರಿಸಿದೆ.

## 2. ಉದ್ದೇಶ:

2.1. ಓ.ಎಫ್.ಸಿ ಅಳವಡಿಕೆ ಪ್ರಕ್ರಿಯೆಯ ಆನ್‌ಲೈನ್ ನಿರ್ವಹಣೆ

2.2. ಅನಧಿಕೃತ ಓ.ಎಫ್.ಸಿ.ಅಳವಡಿಕೆ ನಿಯಂತ್ರಣ ಮತ್ತು ನಿರ್ಮೂಲನೆ

2.3. ದಂಡ ನಿಯಮಾವಳಿಗಳ ಜಾರಿ.

## 3. ಸಾಮಾನ್ಯ ನಿಗದಿತ ಕಾರ್ಯವಿಧಾನದ ವ್ಯಾಪ್ತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲ ರಸ್ತೆಗಳು.

## 4. ಉತ್ತರದಾಯಿತ್ವ

| | | | |
|---|---|---|---|
| 1. | ಓ.ಎಫ್.ಸಿ. ಅಳವಡಿಕೆ ಆನ್‌ಲೈನ್ ಪ್ರಕ್ರಿಯೆ ನಿರ್ವಹಣೆ | : | ಓ.ಎಫ್.ಸಿ ವಿಭಾಗ |
| 2. | ಓ.ಎಫ್.ಸಿ ಅಳವಡಿಕೆ ಆನ್‌ಲೈನ್ ಮನವಿ ಸಲ್ಲಿಸುವುದು | : | ಓ.ಎಫ್.ಸಿ ಸಂಸ್ಥೆಗಳು |
| 3. | ಓ.ಎಫ್.ಸಿ. ಅಳವಡಿಕೆ ಮನವಿ ಬಗ್ಗೆ ಅಭಿಪ್ರಾಯ | : | ಜ್ಯುರಿಸ್‌ಡಿಕ್ಷನಲ್ ಅಭಿಯಂತರರು |
| 4. | ಓ.ಎಫ್.ಸಿ. ಅಳವಡಿಕೆ ಡಿಮ್ಯಾಂಡ್ ನೋಟ್ | : | ಕಾ.ಪಾ.ಅ (ಓ.ಎಫ್.ಸಿ) |
| 5. | ಓ.ಎಫ್.ಸಿ. ಅಳವಡಿಕೆ ಅನುಮತಿ | : | ಮು.ಅ (ಓ.ಎಫ್.ಸಿ) |
| 6. | ಓ.ಎಫ್.ಸಿ. ಅಳವಡಿಕೆ ಮೇಲ್ವಿಚಾರಣೆ | : | ಜ್ಯುರಿಸ್‌ಡಿಕ್ಷನಲ್ ಅಭಿಯಂತರರು |
| 7. | ಅನಧಿಕೃತ ಓ.ಎಫ್.ಸಿ. ತೆರವು | : | ಜ್ಯುರಿಸ್‌ಡಿಕ್ಷನಲ್ ಅಭಿಯಂತರರು |
| 8. | ಆದೇಶಗಳು, ನಿಯಮಗಳು ಮತ್ತು ಸಾಮಾನ್ಯವಲ್ಲದ ಎಲ್ಲ ಕಡತಗಳು | : | ಶಿಫಾರಸು – ವಿಶೇಷ ಆಯುಕ್ತರು (ಯೋಜನೆ)<br>ಅನುಮೋದನೆ– ಆಯುಕ್ತರು |

## 5. ಜಿ.ಐ.ಎಸ್. ಜಾಲತಾಣದಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ಪ್ರಕ್ರಿಯೆ

5.1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಅಳವಡಿಕೆ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಿರ್ವಹಿಸುವ ಬಾಧ್ಯತೆ ಓ.ಎಫ್.ಸಿ. ಕೋಶದ್ದಾಗಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ಮತ್ತು ಮೇಲ್ವಿಚಾರಕ ಅಧಿಕಾರಿಗಳಿಂದ ಓ.ಎಫ್.ಸಿ. ಅಳವಡಿಕೆ ಬಗ್ಗೆ ಅಭಿಪ್ರಾಯ ಪಡೆದು ಸದರಿ ಅಭಿಪ್ರಾಯಕ್ಕೆ ಅನುಗುಣವಾಗಿ ಓ.ಎಫ್.ಸಿ. ಅಳವಡಿಕೆ ಅನುಮತಿ ನೀಡುವ ಅಥವಾ ನಿರಾಕರಿಸುವ ಜವಾಬ್ದಾರಿಯನ್ನು ಓ.ಎಫ್.ಸಿ. ಕೋಶವು ಹೊಂದಿದೆ.

5.2. ಓ.ಎಫ್.ಸಿ ಸಂಸ್ಥೆಗಳು ಪಾಲಿಕೆಯೊಡನೆ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ ಅಂತಹ ಸಂಸ್ಥೆಗಳಿಗೆ ಪಾಲಿಕೆಯ ಜಿ.ಐ.ಎಸ್. ಜಾಲತಾಣದಲ್ಲಿ ಬಳಕೆದಾರ ಐಡಿ ನೀಡಲಾಗುತ್ತಿದ್ದು ಓ.ಎಫ್.ಸಿ.

ಅಳವಡಿಸುವ ಸಂದರ್ಭದಲ್ಲಿ ಓ.ಎಫ್.ಸಿ ಸಂಸ್ಥೆಗಳು ಜಿ.ಐ.ಎಸ್. ಜಾಲತಾಣದಲ್ಲಿ ತಮ್ಮ ಬಳಕೆದಾರ ಐಡಿ ಮೂಲಕ ಅಳವಡಿಕೆ ಉದ್ದ, ಡಕ್ಟ್ ಸಂಖ್ಯೆ, ಗುಂಡಿಗಳ ಸಂಖ್ಯೆ ಮತ್ತು ಛೇಂಬರ್ ಸಂಖ್ಯೆ ವಿವರಗಳೊಂದಿಗೆ ಜಿ.ಐ.ಎಸ್. ಜಾಲತಾಣ ನಕ್ಷೆಯಲ್ಲಿ ಚಿತ್ರಿಸಿ ಓ.ಎಫ್.ಸಿ. ಅಳವಡಿಕೆ ಮನವಿಯನ್ನು ಸಲ್ಲಿಸುವುದು.

5.3. ಸದರಿ ಮನವಿಯನ್ನು ಪರಿಶೀಲಿಸಿ ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಅಭಿಯಂತರರಿಗೆ ಓ.ಎಫ್.ಸಿ ಕೋಶದ ಕಾರ್ಯಪಾಲಕ ಅಭಿಯಂತರರು ಆನ್‌ಲೈನ್ ಮೂಲಕ ಪ್ರಚಲಿಸುವುದು.

5.4. ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು(ರಮೂಸೌ) ಜ್ಯುರಿಸ್‌ಡಿಕ್ಷನಲ್ ಅಧಿಕಾರಿಗಳಾಗಿರುತ್ತಾರೆ.

5.5. ಯಾವುದೇ ರಸ್ತೆ ಕಾಮಗಾರಿ ಕೈಗೊಳ್ಳುವ ಮತ್ತು ರಸ್ತೆಯ ಮೇಲೆ ಕಾರ್ಯವ್ಯಾಪ್ತಿ ಹೊಂದಿರುವ ಅಧಿಕಾರಿಗಳು ಕಡ್ಡಾಯವಾಗಿ ರೋಡ್ ಹಿಸ್ಟರಿ ಮತ್ತು ರೋಡ್ ಇನ್ವೆಂಟರಿ ಸೇರಿದಂತೆ ರಸ್ತೆ ಇತಿಹಾಸ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಪಾಲಿಕೆಯ ಓ.ಎಫ್.ಸಿ. ಜಿ.ಐ.ಎಸ್. ಜಾಲತಾಣವು ರಸ್ತೆ ಇತಿಹಾಸ ಜಾಲತಾಣದ ಅಂಗವಾಗಿರುವ ಹಿನ್ನೆಲೆಯಲ್ಲಿ ಯಾವುದೇ ರಸ್ತೆಯ ಕಾಮಗಾರಿ ಕೈಗೊಳ್ಳುವ ಪೂರ್ವದಲ್ಲಿ ಮತ್ತು ರಸ್ತೆಯ ಮೇಲೆ ಕಾರ್ಯವ್ಯಾಪ್ತಿ ಬದಲಾದ ಸಂದರ್ಭದಲ್ಲಿ ಉಸ್ತುವಾರಿ ವಹಿಸಿಕೊಂಡಿರುವ ಶಾಖೆಯ ಅಧಿಕಾರಿಗಳು ಜುರಿಸ್‌ಡಿಕ್ಷನಲ್ ಅಧಿಕಾರಿಗಳಾಗಿ ಬದಲಾಗುತ್ತಾರೆ. ಅಂತಹ ಅಧಿಕಾರಿಗಳು ಪಾಲಿಕೆಯ ಓ.ಎಫ್.ಸಿ. ಜಿ.ಐ.ಎಸ್. ಜಾಲತಾಣಕ್ಕೆ ಬದಲಾವಣೆ ತರಲು ಆಯುಕ್ತರ ಮೂಲಕ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಮನವಿ ಸಲ್ಲಿಸಿ ರಸ್ತೆಗಳ ಜುರಿಸ್‌ಡಿಕ್ಷನಲ್ ಅಧಿಕಾರಿಗಳಾಗಿ ಬದಲಾವಣೆ ಮಾಡಿಕೊಳ್ಳತಕ್ಕದ್ದು. (ಉದಾ: ವಾರ್ಡ್ ರಸ್ತೆಗಳನ್ನು ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ಅಭಿವೃದ್ಧಿಗೊಳಿಸುವ ಅಥವಾ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ಯೋಜನೆ ಕೇಂದ್ರ ವಿಭಾಗದಿಂದ ಅಭಿವೃದ್ಧಿಗೊಳಿಸುವ ಪೂರ್ವದಲ್ಲಿ ರೋಡ್ ಹಿಸ್ಟರಿಯನ್ನು ಕಡ್ಡಾಯವಾಗಿ ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುವುದು. ಒಂದೇ ಶಾಖೆಯಲ್ಲಿ ಜವಾಬ್ದಾರಿ ಹಸ್ತಾಂತರವಾದ ಸಂದರ್ಭದಲ್ಲಿ ಸಹ ಜವಾಬ್ದಾರಿ ಪಡೆದುಕೊಂಡ ಅಧಿಕಾರಿ ರೋಡ್ ಹಿಸ್ಟರಿಯನ್ನು ಕಡ್ಡಾಯವಾಗಿ ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುವುದು.)

5.6. ಓ.ಎಫ್.ಸಿ ಕೋಶದ ಮೂಲಕ ಆನ್‌ಲೈನ್ ಪೋರ್ಟಲ್ ಮೂಲಕ ಸ್ವೀಕೃತವಾದ ಓ.ಎಫ್.ಸಿ. ಅಳವಡಿಕೆ ಮನವಿಯನ್ನು ಕುರಿತು ಅಭಿಪ್ರಾಯಗಳನ್ನು ನೀಡಲು ಆನ್‌ಲೈನ್ ಮನವಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ ದಿನದಿಂದ ಕೆಳಕಂಡಂತೆ ಕಾಲಮಿತಿಯನ್ನು ಕೂಡ ಅಭಿಪ್ರಾಯ ನೀಡಬೇಕಿರುವ ಅಧಿಕಾರಿಗಳಿಗೆ ವಿಧಿಸಲಾಗಿದೆ.

## A. ವಾರ್ಡ್‌ಗಳ ರಸ್ತೆ ಕಾರ್ಯವ್ಯಾಪ್ತಿ

- ಮು.ಅ. (ಓ.ಎಫ್.ಸಿ ಕೋಶ)ರವರಿಂದ ಓ.ಎಫ್.ಸಿ ಅಳವಡಿಕೆ ಮನವಿಯು ಅಭಿಪ್ರಾಯಕ್ಕಾಗಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 9 ದಿನಗಳ ಒಳಗಾಗಿ ಸಹಾಯಕ ಅಭಿಯಂತರರು

ತಮ್ಮ ಅಭಿಪ್ರಾಯ ದಾಖಲಿಸಿ ಮೇಲಧಿಕಾರಿಯಾದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.

- ಹೀಗೆ ಸಹಾಯಕ ಅಭಿಯಂತರರಿಂದ ಓ.ಎಫ್.ಸಿ ಅಳವಡಿಕೆ ಬಗ್ಗೆ ಅಭಿಪ್ರಾಯವು ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 5 ದಿನಗಳ ಒಳಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ದಾಖಲಿಸಿ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.

B. ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯವ್ಯಾಪ್ತಿ

- ಮು.ಅ. (ಓ.ಎಫ್.ಸಿ ಕೋಶ)ರವರಿಂದ ಓ.ಎಫ್.ಸಿ ಅಳವಡಿಕೆ ಮನವಿಯು ಅಭಿಪ್ರಾಯಕ್ಕಾಗಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 9 ದಿನಗಳ ಒಳಗಾಗಿ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ದಾಖಲಿಸಿ ಮೇಲಧಿಕಾರಿಯಾದ ಮುಖ್ಯ ಅಭಿಯಂತರರು (ರಮೂಸೌ) ಆನ್‌ಲೈನ್ ಮುಖೇನ ಕಳುಹಿಸುವುದು.
- ಹೀಗೆ ಕಾರ್ಯಪಾಲಕ ಅಭಿಯಂತರರಿಂದ ಓ.ಎಫ್.ಸಿ ಅಳವಡಿಕೆ ಬಗ್ಗೆ ಅಭಿಪ್ರಾಯವು ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 5 ದಿನಗಳ ಒಳಗಾಗಿ ಮುಖ್ಯ ಅಭಿಯಂತರರು (ರಮೂಸೌ)ರವರು ತಮ್ಮ ಅಭಿಪ್ರಾಯ ದಾಖಲಿಸಿ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.

5.7. **ಸದರಿ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ನಿಕಟಪೂರ್ವದಲ್ಲಿ ರಸ್ತೆಗೆ ಡಾಂಬರೀಕರಣ ಮಾಡಿರುವ ದಿನಾಂಕ ಮತ್ತು ಓ.ಎಫ್.ಸಿ. ಅಳವಡಿಕೆ ಬಗ್ಗೆ ಸ್ಪಷ್ಟ ಅಭಿಪ್ರಾಯ ದಾಖಲಿಸತಕ್ಕದ್ದು (ಉದಾ: "May be permitted", "Can not be permitted", "Approved", "Rejected", "May be permitted on the shoulder" ಇತ್ಯಾದಿ)**

5.8. ಸಂಬಂಧಪಟ್ಟ ಅಧಿಕಾರಿಗಳ ಸಕಾರಾತ್ಮಕ ಅಭಿಪ್ರಾಯ ಸ್ವೀಕೃತವಾದ ಪಕ್ಷದಲ್ಲಿ ಮೂರು ವರ್ಷಕ್ಕೂ ಪೂರ್ವದಲ್ಲಿ ಡಾಂಬರೀಕರಣ ಮಾಡಿರುವ ರಸ್ತೆಗಳಿಗೆ ಮಾತ್ರ ಓ.ಎಫ್.ಸಿ.ಅಳವಡಿಕೆ ಮನವಿಗೆ ಓ.ಎಫ್.ಸಿ.ಕೋಶದ ಕಾರ್ಯಪಾಲಕ ಅಭಿಯಂತರರು ಡಿಮ್ಯಾಂಡ್ ನೋಟ್ ಜಾರಿಗೊಳಿಸತಕ್ಕದ್ದು. ಆನಂತರದಲ್ಲಿ ನಿಗದಿತ ಶುಲ್ಕ ಪಾವತಿಯಾದ ನಂತರದಲ್ಲಿ ಓ.ಎಫ್.ಸಿ.ಅಳವಡಿಕೆ ಅನುಮತಿ ನೀಡತಕ್ಕದ್ದು.

5.9. ಅಲ್ಲದೇ, ವಿಧಿಸಿರುವ ನಿರ್ದಿಷ್ಟ ಕಾಲಮಿತಿಯೊಳಗೆ ಅಧಿಕಾರಿಗಳು ತಮ್ಮ ಅಭಿಪ್ರಾಯ ನಮೂದಿಸಿ ಆನ್‌ಲೈನ್ ಮುಖೇನ ಕಳುಹಿಸದ ಸಂದರ್ಭಗಳಲ್ಲಿ ಕಾಲಮಿತಿ ಮೀರಿದ ತಕ್ಷಣ ಮುಂದಿನ ಹಂತಕ್ಕೆ ಸ್ವಯಂಚಾಲಿತವಾಗಿ ಓ.ಎಫ್.ಸಿ ಅಳವಡಿಕೆ ಮನವಿಯು **"ಅಭಿಪ್ರಾಯ ನೀಡುವ ಕಾಲಮಿತಿ ಮೀರಿರುವ ಕಾರಣ ಸ್ವಯಂಚಾಲಿತವಾಗಿ ಅನುಮೋದಿಸಲಾಗಿದೆ"** ಎಂಬ **ಟಿಪ್ಪಣಿಯೊಂದಿಗೆ ಕಳುಹಿಸಲ್ಪಡುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ.**

5.10. **ಮತ್ತು ಹೀಗೆ ಸ್ವಯಂಚಾಲಿತವಾಗಿ ಅನುಮೋದಿಸಲ್ಪಟ್ಟು ಕಳುಹಿಸಲ್ಪಡುವ ಅಭಿಪ್ರಾಯಗಳನ್ನು** ಸಂಬಂಧಪಟ್ಟ ಅಧಿಕಾರಿಗಳ ಸಕಾರಾತ್ಮಕ ಅಭಿಪ್ರಾಯವೆಂದು ಪರಿಗಣಿಸಿ ಓ.ಎಫ್.ಸಿ.ಅಳವಡಿಕೆ

ಮನವಿಗೆ ಡಿಮ್ಯಾಂಡ್ ನೋಟ್ ಜಾರಿಗೊಳಿಸಿ ನಿಗದಿತ ಶುಲ್ಕ ಪಡೆದು ಓ.ಎಫ್.ಸಿ.ಅಳವಡಿಕೆ ಅನುಮತಿ ನೀಡಲು ಓ.ಎಫ್.ಸಿ.ಕೋಶದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿದೆ.

5.11. ಓ.ಎಫ್.ಸಿ ಅಳವಡಿಕೆಯ ಬಗ್ಗೆ ಅಭಿಪ್ರಾಯ ನೀಡಬೇಕಿರುವ ಅಧಿಕಾರಿಗಳು ಯಾವುದೇ ಕಾರಣಕ್ಕೆ ಸಕಾಲದಲ್ಲಿ ಅಭಿಪ್ರಾಯವನ್ನು ಪಾಲಿಕೆಯ ಜಿ.ಐ.ಎಸ್–ಓ.ಎಫ್.ಸಿ. ಜಾಲತಾಣದಲ್ಲಿ ದಾಖಲಿಸದ ಸಂದರ್ಭಗಳಲ್ಲಿ ಸ್ವಯಂಚಾಲಿತವಾಗಿ ಓ.ಎಫ್.ಸಿ ಅಳವಡಿಕೆ ಮನವಿಗೆ ಸಕಾರಾತ್ಮಕ ಅಭಿಪ್ರಾಯದೊಂದಿಗೆ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಕಳುಹಿಸಲ್ಪಟ್ಟು ಓ.ಎಫ್.ಸಿ. ಅಳವಡಿಕೆ ಅನುಮತಿ ನೀಡಲ್ಪಡುವ ಸಂದರ್ಭಗಳಲ್ಲಿ ಓ.ಎಫ್.ಸಿ. ಅಳವಡಿಕೆಯಿಂದಾಗಿ ಮುಂದೆ ಸಂಭವಿಸಬಹುದಾದ ಎಲ್ಲ ಅನಪೇಕ್ಷಿತ ಅಥವಾ ಪ್ರತಿಕೂಲ ಪರಿಣಾಮಗಳಿಗೆ, ತಮ್ಮ ಅಭಿಪ್ರಾಯವನ್ನು ಕಾಲಮಿತಿಯಲ್ಲಿ ನೀಡದ ಅಭಿಯಂತರರು ನೇರವಾಗಿ ಹೊಣೆಗಾರರಾಗಿರುತ್ತಾರೆ.

5.12. ಓ.ಎಫ್.ಸಿ. ಅಳವಡಿಕೆಯನ್ನು ಸಿಂಗಲ್ ವಿಂಡೋ ಮಾದರಿಯಲ್ಲಿ ನಡೆಸಲು ಉದ್ದೇಶಿಸಲಾಗಿದ್ದು ಸಂಚಾರ ಪೋಲಿಸ್, ಬಿ.ಡಬ್ಲ್ಯು.ಎಸ್.ಎಸ್.ಬಿ, ಬೆಸ್ಕಾಂ, ಕೆಪಿಟಿಸಿಎಲ್, ಬಿಎಂಆರ್‌ಸಿಎಲ್, ಗೇಲ್, ಗೇಲ್ ಗ್ಯಾಸ್ ಲಿ. ಮತ್ತು ಸಣ್ಣ ನೀರಾವರಿ ಇಲಾಖೆಗಳ ನೋಡಲ್ ಅಧಿಕಾರಿಗಳಿಗೆ ಓ.ಎಫ್.ಸಿ.–ಜಿ.ಐ.ಎಸ್. ಜಾಲತಾಣದಲ್ಲಿ ಯುಸರ್ ಐ.ಡಿ. ನೀಡಲಾಗುವುದು. ಸದರಿ ಅಧಿಕಾರಿಗಳು ಮನವಿ ಸ್ವೀಕೃತವಾದ 10 ದಿನಗಳೊಳಗಾಗಿ ತಮ್ಮ ಅಭಿಪ್ರಾಯವೇನಾದರೂ ಇದ್ದಲ್ಲಿ ದಾಖಲಿಸುವುದು. ಓ.ಎಫ್.ಸಿ ಅಳವಡಿಕೆ ಮನವಿಗಳ ಉದ್ದೇಶಿತ ಅಳವಡಿಕೆ ಮಾರ್ಗದಲ್ಲಿ ಮೂಲಸೌಕರ್ಯ ಕೊಳವೆಗಳು/ಕೇಬಲ್‌ಗಳು ಕನಿಷ್ಠ 1.5 ಮೀ ಹಾರಿಝಾಂಟಲ್ ವ್ಯಾಪ್ತಿಯಲ್ಲಿ ಇದ್ದಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ನೀಡುವಂತಿಲ್ಲ. ಸದರಿ ಸಂಸ್ಥೆಗಳು 10 ದಿನಗಳೊಳಗಾಗಿ ತಮ್ಮ ಅಭಿಪ್ರಾಯ ದಾಖಲಿಸದಿದ್ದಲ್ಲಿ ಅಳವಡಿಕೆಗೆ ಆ ಸಂಸ್ಥೆಗಳ ಆಭ್ಯಂತರವೇನೂ ಇಲ್ಲವೆಂದು ಪರಿಗಣಿಸಿ ಅನುಮತಿ ನೀಡಲಾಗುವುದು. ಆದರೆ ಬಿಬಿಎಂಪಿಯಿಂದ ಅನುಮತಿ ನೀಡಲ್ಪಟ್ಟ ನಂತರ ಸದರಿ ಸಂಸ್ಥೆಗಳು ಯಾವುದೇ ಕಾರಣಕ್ಕೆ ಓ.ಎಫ್.ಸಿ. ಅಳವಡಿಕೆಗೆ ತಡೆಯೊಡ್ಡುವಂತಿಲ್ಲ ಮತ್ತು ಸದರಿ ಸಂಸ್ಥೆಗಳ ಅನುಮತಿಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ.

5.13. ಜುರಿಸ್‌ಡಿಕ್ಷನಲ್ ಅಭಿಯಂತರರ ಅಭಿಪ್ರಾಯ ಪಡೆಯದೇ ಓ.ಎಫ್.ಸಿ. ಅಳವಡಿಕೆ ಅನುಮತಿ ನೀಡಲ್ಪಟ್ಟ ಪಕ್ಷದಲ್ಲಿ ಸದರಿ ಅನುಮತಿಯ ಪ್ರತಿಯನ್ನು ಓ.ಎಫ್.ಸಿ ಕೋಶವು ಸಂಬಂಧಪಟ್ಟ ವಲಯ ಅಥವಾ ಕೇಂದ್ರ ಕಛೇರಿಗೆ ಕಳುಹಿಸಿಕೊಡುವುದು. ಜುರಿಸ್‌ಡಿಕ್ಷನಲ್ ಅಭಿಯಂತರರು ಸಕಾರಾತ್ಮಕ ಅಭಿಪಾಯ ನೀಡಿದಲ್ಲಿ ಓ.ಎಫ್.ಸಿ. ಅಳವಡಿಕೆ ಅನುಮತಿ ನೀಡಲ್ಪಟ್ಟ ಪಕ್ಷದಲ್ಲಿ ಅನುಮತಿಯ ಪ್ರತಿಯನ್ನು ಕಳುಹಿಸಿಕೊಡುವ ಅಗತ್ಯವಿರುವುದಿಲ್ಲ.

5.14. ಓ.ಎಫ್.ಸಿ. ಅಳವಡಿಕೆ ಅನುಮತಿ ಬಗ್ಗೆ ಈ ಕೆಳಗಿನ ಷರತ್ತುಗಳನ್ನು ಅನುಮತಿ ಪತ್ರದಲ್ಲಿ ಅಳವಡಿಸತಕ್ಕದ್ದು ಮತ್ತು ಓ.ಎಫ್.ಸಿ. ಸಂಸ್ಥೆ ಪಾಲಿಸತಕ್ಕದ್ದು

Conditions for HDD Method OFC laying

- This Permission is to be read along with the MOU signed with BBMP



ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- The concerned ward engineer/Jurisdictional Engineer shall supervise the work and ensure that the conditions imposed are complied with.

- 1 Day before commencement of the work, the Agency must give prior written intimation to the Jurisdictional Engineers; Zonal or Road Infrastructure Engineers of BBMP as the case may be and also keep the BBMP Engineers informed of the schedule of Execution of work.

- Laying of OFC in Newly asphalted Roads is strictly prohibited for a period of Three year as per the Commissioner order.

- Permission is valid only for the above sanctioned period. In case of expiry of the sanctioned period fresh requisition shall be submitted for Time Extension. which will be considered based on the reasons given and which will attract extra fees as applicable. Such requisition for extension of time should be submitted at least 15 days before the expiry of sanctioned period.

- All HDD Pits must be restored on the same day itself. Any delay is liable for penalty as per Government order.

- Excavation must be as per the instructions of the concerned BBMP Zonal/Road Infrastructure Engineers.

- Any over burden debris/earth should be removed immediately and conveyed to the designated dumping yards failing which, a penalty of Rs: 10,000/- per day will be levied by the concerned ward engineer.

- Strictly follow the procedure laid down in road opening and restoration protocol. Barricading sign boards and other precautionary signage, name and telephone numbers of the executing Agency, opening and closing dates should be displayed, also warning lights should be displayed for the road users and for easy flow of traffic during execution of work, failing which it would attract heavy penalty and cancellation of permission, etc and also entail blacklisting of the executing Agency.

- During execution of work, care must be taken not to cause any damages to BBMP property like drains, Name boards, etc. In case of such damage, commensurate penalty to be paid.



ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- **Absolutely no deviations from the permitted route is allowed. If deviation is found, not only penalty would be levied, the cable on the deviation portion would be confiscated /destroyed.**

- After the completion of the rectified portion of the subject road, the same should be maintained for 2 (two) years.

- After completion of the work, as per specification given by BBMP, the Agency must get a Satisfactory Work done Certificate from the jurisdictional BBMP Engineers along with 3rd party inspection reports. After the DLP (Defect Liability Period) of 2 years, a satisfactory completion and maintenance Report/Certificate by the jurisdictional BBMP Engineers should be furnished to this office to enable release of the Security Deposit.

- During execution, any damage caused to the limb or life of public, damage caused to any Government / BESCOM / BSNL / BWSSB / KPTCL / Gail India Limited etc, property, the responsibility lies solely with the executing Agency and any claims/compensation should be borne by the executing Agency alone.

- Redoing of Road cut portion to be carried out as per the MORTH Specification, procedure for Redoing of Road cut portion, specification details and sketch enclosed.

- If any HTUG/GAS PIPELINE by HDD/OPEN TRENCH Method work is executed on newly asphalted roads, the cost of the resurfacing of the entire length and width of the road will be recovered from the executing agency.

- During Rainy season, extra care should be taken to ensure that the pits are properly barricaded keeping in mind the safety of pedestrian and vehicular traffic.

- The Agency should not cause any inconvenience to public while executing the work.

- The OFC Cable shall be laid along the berm or shoulder where ever possible in consultation with the jurisdictional Engineer.

- If preinstalled OFC Utility ducts are available in any stretch, OFC shall be installed in only those ducts and related fees shall be paid to BBMP.

- This permission is valid only after this permission is submitted along with the original permission to jurisdictional engineers by the agencies before commencing of execution work. This permission is also null and void if the works are carried out without notifying the concerned Jurisdictional Engineers.

- The Agency shall be held responsible for if any potholes are created by their work or non-restoration of road cut portions thereof.

5.15. ಓ.ಎಫ್.ಸಿ. ಅಳವಡಿಕೆ ಪ್ರಕ್ರಿಯೆಗೆ ಕಾಲಾವಧಿಯನ್ನು ಈಕೆಳಗಿನಂತೆ ನಿಗದಿಪಡಿಸಿದೆ.

| ಕ್ರ.ಸಂ. | ಅಳವಡಿಕೆ ಉದ್ದ | ನಿಗದಿತ ಕಾಲಮಿತಿ |
|---|---|---|
| 1. | 0 – 2 ಕಿ.ಮೀ. | 2 ತಿಂಗಳು |

5.16. ಓ.ಎಫ್.ಸಿ ಅಳವಡಿಕೆ ಪ್ರಕ್ರಿಯೆ ಜುರಿಸ್‌ಡಿಕ್ಷನಲ್ ಅಧಿಕಾರಿಗಳ ಕಡ್ಡಾಯ ಮೇಲ್ವಿಚಾರಣೆ ಉಪಸ್ಥಿತಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಡೆಯಬೇಕು ಮತ್ತು ನಡೆಯುತ್ತಿರುವ ಕೆಲಸದ ಬಗ್ಗೆ ವಿವರಗಳುಳ್ಳ ಫಲಕಗಳನ್ನು ಕೆಲಸ ನಡೆಯುತ್ತಿರುವ ಸ್ಥಳಗಳಲ್ಲಿ ಪ್ರದರ್ಶಿಸಬೇಕಿರುತ್ತದೆ.

5.17. ಓ.ಎಫ್.ಸಿ. ಅನುಮತಿ ಪತ್ರಗಳಲ್ಲಿ ನಿಗದಿಪಡಿಸಿರುವಷ್ಟೇ ಸಂಖ್ಯೆಯ ಹೆಚ್.ಡಿ.ಡಿ. ಅಳವಡಿಕೆ ಗುಂಡಿಗಳನ್ನು ತೋಡುವ ಬಗ್ಗೆ ಮತ್ತು ನಿಗದಿಯಾದ ಉದ್ದಕ್ಕೆ ಕಡ್ಡಾಯವಾಗಿ ಸೀಮಿತವಾಗಿ ಓ.ಎಫ್.ಸಿ ಅಳವಡಿಕೆಯಾಗುವುದನ್ನು ಜುರಿಸ್‌ಡಿಕ್ಷನಲ್ ಅಧಿಕಾರಿಗಳು ಖಾತರಿ ಪಡಿಸಿಕೊಳ್ಳಬೇಕು.

5.18. ಓ.ಎಫ್.ಸಿ. ಅನುಮತಿ ಪತ್ರಗಳಲ್ಲಿ ನಿಗದಿಪಡಿಸಿರುವ ಸಂಖ್ಯೆಯ ಹೆಚ್.ಡಿ.ಡಿ. ಅಳವಡಿಕೆ ಗುಂಡಿಗಳಿಗಿಂತ ಹೆಚ್ಚು ಗುಂಡಿಗಳನ್ನು ತೋಡಿದ್ದಲ್ಲಿ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ಸದರಿ ರಸ್ತೆ ಭಾಗದ ಪುನರ್ ನಿರ್ಮಾಣ ಆಯಾ ಸಂಸ್ಥೆಗಳಿಂದಲೇ ಮಾಡಿಸುವುದಲ್ಲದೆ ಪ್ರತಿ ಹೆಚ್ಚುವರಿ ಗುಂಡಿಗೆ ರೂ.100,000/– ದಂಡ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ವಿಧಿಸುವುದು.

## 6. ಓ.ಎಫ್.ಸಿ ಅಳವಡಿಕೆ ನಂತರ ರಸ್ತೆ ಪುನಶ್ಚೇತನ ಪ್ರಕ್ರಿಯೆ

6.1. ರಸ್ತೆ ಪುನಶ್ಚೇತನಕ್ಕಾಗಿ ಪಾಲಿಕೆಯಲ್ಲಿ ಪ್ರತಿ ವಲಯಕ್ಕೆ ಒಂದು ಮತ್ತು ರಸ್ತೆ ಮೂಲಭೂತ ಸೌಕರ್ಯವ್ಯಾಪ್ತಿಯ ರಸ್ತೆಗಳಿಗೆ ಎರಡು ಗುತ್ತಿಗೆದಾರರನ್ನು ಟಿ.ಇ.ಸಿ. ವಿಭಾಗದಿಂದ ನೇಮಿಸಿಕೊಳ್ಳಲಾಗಿದೆ.

6.2. ಓ.ಎಫ್.ಸಿ. ಅಳವಡಿಕೆ ಪೂರ್ಣಗೊಂಡ 96 ಘಂಟೆಗಳಲ್ಲಿ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳ ರಸ್ತೆ ಪುನಶ್ಚೇತನ ಬಿಬಿಎಂಪಿಯಿಂದ ವಲಯ ಹಂತದಲ್ಲಿ ಅಥವಾ ನಿಗದಿತ ವ್ಯಾಪ್ತಿಯಲ್ಲಿ

6.2. ಓ.ಎಫ್.ಸಿ. ಅಳವಡಿಕೆ ಪೂರ್ಣಗೊಂಡ 96 ಘಂಟೆಗಳಲ್ಲಿ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳ ರಸ್ತೆ ಪುನಶ್ಚೇತನ ಬಿಬಿಎಂಪಿಯಿಂದ ವಲಯ ಹಂತದಲ್ಲಿ ಅಥವಾ ನಿಗದಿತ ವ್ಯಾಪ್ತಿಯಲ್ಲಿ ರಸ್ತೆ ಪುನಶ್ಚೇತನಕ್ಕೆ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ನೇಮಿಸಲಾಗಿರುವ ಗುತ್ತಿಗೆದಾರರಿಂದ ಪೂರ್ಣಗೊಳ್ಳುವಂತೆ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ನೋಡಿಕೊಳ್ಳುವುದು. ಓ.ಎಫ್.ಸಿ. ಅಳವಡಿಕೆ ಪೂರ್ಣಗೊಂಡ 96 ಘಂಟೆಗಳಲ್ಲಿ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳ ರಸ್ತೆ ಪುನಶ್ಚೇತನ ಪೂರ್ಣಗೊಳ್ಳದ ಪಕ್ಷದಲ್ಲಿ ಆಗುವ ಎಲ್ಲ ಅನಾಹುತಗಳಿಗೆ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.

## 7. ದಂಡ ನಿಯಮಾವಳಿ

7.1 ಓ.ಎಫ್.ಸಿ. ಅಳವಡಿಕೆ ಅನುಮತಿ ಪಡೆದಿರುವ ಸಂದರ್ಭಗಳಲ್ಲಿ ಜುರಿಸ್‌ಡಿಕ್ಷನಲ್ ಇಂಜಿನಿಯರ್‌ಗಳಿಗೆ ಲಿಖಿತ ಪೂರ್ವಮಾಹಿತಿ ನೀಡುವುದು ಕಡ್ಡಾಯವಾಗಿದ್ದು ಪೂರ್ವಮಾಹಿತಿ ನೀಡದ ಸಂಸ್ಥೆಗಳಿಗೆ ಸದರಿ ಅನುಮತಿಗೆ ಪಾವತಿಸಿರುವ ಮೇಲ್ವಿಚಾರಣಾ ಶುಲ್ಕದ 25% ವನ್ನು ದಂಡವಾಗಿ ವಿಧಿಸುವುದು.

7.2. ಓ.ಎಫ್.ಸಿ. ಅಳವಡಿಕೆಯನ್ನು ಓಪನ್ ಟ್ರೆಂಚ್ ಮಾದರಿಯಲ್ಲಿ ಮಾಡುವುದನ್ನು ನಿಷೇಧಿಸಲಾಗಿದ್ದು, ಅನಿವಾರ್ಯ ಸಂದರ್ಭದಲ್ಲಿ ಸಹ 10 ಮೀಟರ್ ಗಿಂತ ಹೆಚ್ಚು ಉದ್ದಕ್ಕೆ ಅಥವಾ ಓಪನ್ ಟ್ರೆಂಚ್ ಮಾದರಿಯಲ್ಲಿ ರಸ್ತೆ ಅಗೆತ ಮಾಡಿದ್ದಲ್ಲಿ, ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ರೂ.25 ಲಕ್ಷ ದಂಡ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ವಿಧಿಸುವುದು.

7.3 [illegible] ಪ್ರಸ್ತುತ ರಸ್ತೆ ಕತ್ತರಿಸುವ ಅನುಮತಿಯನ್ನು ನಿರ್ದಿಷ್ಟ ಕಾಲಮಿತಿಯೊಂದಿಗೆ ನೀಡಲಾಗುತ್ತಿದ್ದು ಕಾಲಮಿತಿ ಮೀರಿದ ನಂತರ ಓ.ಎಫ್.ಸಿ. ಅಳವಡಿಕೆ ಕೈಗೊಂಡ ಪಕ್ಷದಲ್ಲಿ ಅನಧಿಕೃತ ಅಳವಡಿಕೆಯೆಂದು ಪರಿಗಣಿಸಿ ಪ್ರತಿ ಘಟನೆಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ರಸ್ತೆ ರೂ.25 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10 ಲಕ್ಷ ದಂಡ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ವಿಧಿಸುವುದು.

7.4. ಓ.ಎಫ್.ಸಿ. ಅಳವಡಿಕೆ ಅನುಮತಿ ಪಡೆದು ಅನುಮತಿಗಿಂತ ಹೆಚ್ಚುವರಿ ಕೇಬಲ್/ಡಕ್ಟ್ ಅಳವಡಿಸಿದ್ದು ಕಂಡುಬಂದಲ್ಲಿ ನಿಗದಿತ ಅಳವಡಿಕೆ ಹಾಗೂ ಮೇಲ್ವಿಚಾರಣೆ ಶುಲ್ಕದ ಮೂರುಪಟ್ಟು ದಂಡ ವಿಧಿಸುವುದು.

7.5. ರಸ್ತೆಗಳಲ್ಲಿ ಡಾಂಬರೀಕರಣದ ಪೂರ್ವದಲ್ಲೇ ರಸ್ತೆ ಕತ್ತರಿಸುವ ಅನುಮತಿ ದೊರೆತಿದ್ದರೂ ಕೂಡ ಅನುಮತಿ ದೊರೆತು ರಸ್ತೆ ಕತ್ತರಿಸುವ ಮೊದಲೇ ರಸ್ತೆ ಡಾಂಬರೀಕರಣ ಕೈಗೊಂಡರೆ, ಪಡೆದಿರುವ ಅನುಮತಿ ಕೂಡಲೇ ಅಸಿಂಧುವಾಗುತ್ತದೆ. ಇದನ್ನು ಉಲ್ಲಂಘಿಸಿ ಹೊಸದಾಗಿ ಡಾಂಬರೀಕರಣಗೊಳಿಸಿರುವ ರಸ್ತೆಯನ್ನು ಕತ್ತರಿಸಿದರೆ ಜುರಿಸ್‌ಡಿಕ್ಷನಲ್ ಅಧಿಕಾರಿಗಳು ನಿಗದಿತ ಜುಲ್ಮಾನೆಯನ್ನು ವಿಧಿಸುವುದು.

## 8. ಅನಧಿಕೃತ ಕೇಬಲ್ ಕುರಿತು ಕೈಗೊಳ್ಳಬೇಕಿರುವ ಕಾರ್ಯವಿಧಾನ

8.1. ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಅನಧಿಕೃತವಾಗಿ ಓ.ಎಫ್.ಸಿ ಅಳವಡಿಸದಂತೆ ತಡೆಯುವ, ಅಧಿಕೃತ ಓ.ಎಫ್.ಸಿ. ಅಳವಡಿಕೆಯ ಮೇಲ್ವಿಚಾರಣೆ ಮಾಡುವ ಮತ್ತು ಅನಧಿಕೃತವಾಗಿ ಅಳವಡಿಸಲಾಗಿರುವ ಓ.ಎಫ್.ಸಿ. ಗಳನ್ನು ತೆರವುಗೊಳಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ವಾರ್ಡ್‌ಗಳ ಸಹಾಯಕ ಮತ್ತು ಕಿರಿಯ ಅಭಿಯಂತರರಿಗೆ ನೀಡಲಾಗಿದ್ದು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಡ್ಡಾಯವಾಗಿ ಮತ್ತು ನಿಯಮಿತವಾಗಿ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡತಕ್ಕದ್ದು.

8.2. ಪಾಲಿಕೆಯ ಜಿ.ಐ.ಎಸ್. ತಾಣದಲ್ಲಿ ಇಲ್ಲಿಯವರೆಗೆ ಅನುಮತಿ ಪಡೆದು ಮತ್ತು ಅನುಮತಿ ರಹಿತವಾಗಿ ಭೂಗತವಾಗಿ ಅಥವಾ ಮೇಲ್ಮಟ್ಟದಲ್ಲಿ ಅಳವಡಿಸಿರುವ ಓ.ಎಫ್.ಸಿ. ಬಗ್ಗೆ ಸ್ವಯಂಘೋಷಣೆ ಮಾಡುವಂತೆ ಓ.ಎಫ್.ಸಿ. ಅಳವಡಿಕೆ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ. ಹೀಗೆ ಘೋಷಿಸಲಾದ ಓ.ಎಫ್.ಸಿ. ವಿವರಗಳು ಪಾಲಿಕೆಯ ಅಧಿಕಾರಿಗಳಿಗೆ ಓ.ಎಫ್.ಸಿ.-ಜಿ.ಐ.ಎಸ್ ಜಾಲತಾಣದಲ್ಲಿ ಲಭ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ವಲಯ ಮಟ್ಟದಲ್ಲಿ ಸದರಿ ಸ್ವಯಂಘೋಷಿತ ವಿವರಗಳನ್ನು ಪರಿಶೀಲಿಸಿ ಅನಧಿಕೃತ ಓ.ಎಫ್.ಸಿ. ಗಳನ್ನು ಜುರಿಸ್‌ಡಿಕ್ಷನಲ್ ಅಧಿಕಾರಿಗಳು ತೆರವುಗೊಳಿಸುವುದು.

8.3. ವಾರ್ಡ್ ವ್ಯಾಪ್ತಿಯಲ್ಲಿರುವ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳಲ್ಲಿ ಈ ಮೇಲಿನ ಕರ್ತವ್ಯವನ್ನು ಸಂಬಂಧಪಟ್ಟ ರಸ್ತೆ ಮೂಲಭೂತ ಸೌಕರ್ಯ ವಿಭಾಗ ಮತ್ತು ಯೋಜನೆ (ಕೇಂದ್ರ) ವಿಭಾಗದ ಸಹಾಯಕ ಅಭಿಯಂತರರು ನಿರ್ವಹಿಸತಕ್ಕದ್ದು ಮತ್ತು ಕಾರ್ಯಪಾಲಕ ಅಭಿಯಂತರರು ಮೇಲ್ವಿಚಾರಣೆ ವಹಿಸತಕ್ಕದ್ದು.

8.4. ಅನಧಿಕೃತವಾಗಿ ರಸ್ತೆ ಕತ್ತರಿಸುವ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳ/ಸಾರ್ವಜನಿಕರ ವಿರುದ್ಧ ಘಟನೆ ನಡೆದ ತಕ್ಷಣದಲ್ಲಿ ಎಫ್.ಐ.ಆರ್. ದಾಖಲಿಸಿ ವಲಯ ವ್ಯಾಪ್ತಿಯಲ್ಲಿ ಜಂಟಿ ಆಯುಕ್ತರು/ವಲಯ ಮುಖ್ಯ ಅಭಿಯಂತರರು ಪ್ರತಿ ಘಟನೆಗೆ ರೂ.25 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10 ಲಕ್ಷ ದಂಡ ವಿಧಿಸಲು ಅನುವಾಗುವಂತೆ ಛಾಯಾಚಿತ್ರಗಳು ಮತ್ತು ಇತರ ದಾಖಲೆಗಳೊಂದಿಗೆ ಕಡತ ಮಂಡಿಸುವ ಜವಾಬ್ದಾರಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಲಾಗಿದೆ. ಮತ್ತು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಮತ್ತು ಯೋಜನೆ (ಕೇಂದ್ರ) ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಎಫ್.ಐ.ಆರ್. ದಾಖಲಿಸಿ ದಂಡ ವಿಧಿಸಲು ಮುಖ್ಯ ಅಭಿಯಂತರರಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

8.5. ದಂಡ ವಿಧಿಸುವ ಕುರಿತು ಸಲ್ಲಿಕೆಯಾಗಿರುವ ಪ್ರಸ್ತಾವನೆಯನ್ನು ಮತ್ತು ಪೂರಕ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆ ಸರಿಯೆಂದು ಕಂಡುಬಂದಲ್ಲಿ, ವಲಯ ವ್ಯಾಪ್ತಿಯಲ್ಲಿ ಜಂಟಿ ಆಯುಕ್ತರು/ಮುಖ್ಯ ಅಭಿಯಂತರರು ಮತ್ತು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಮತ್ತು ಯೋಜನೆ (ಕೇಂದ್ರ) ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಮುಖ್ಯ ಅಭಿಯಂತರರು /ಯೋಜನೆ ಹಾಗೂ ರಸ್ತೆ ಮೂಲಭೂತ ಸೌಕರ್ಯ ಹಾಗೂ ಜುರಿಸ್‌ಡಿಕ್ಷನಲ್ ಇಂಜಿನಿಯರ್‌ರವರು ದಂಡ ವಿಧಿಸಿ ಕಡತವನ್ನು ಮುಂದಿನ ಕ್ರಮಕ್ಕಾಗಿ ಮುಖ್ಯ ಅಭಿಯಂತರರು(ಓ.ಎಫ್.ಸಿ.)ರವರಿಗೆ ಕಳುಹಿಸತಕ್ಕದ್ದು.

## 9. ಓ.ಎಫ್.ಸಿ ಅಳವಡಿಕೆಗೆ ಬಿಬಿಎಂಪಿಯಿಂದಲೇ ಮೂಲಸೌಕರ್ಯ ಡಕ್ಟ್ ಅಳವಡಿಸಿರುವ ರಸ್ತೆಗಳು



ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

9.1. ಓ.ಎಫ್.ಸಿ. ಅಳವಡಿಕೆಗೆ ಅನುವಾಗುವಂತೆ ಮತ್ತು ರಸ್ತೆ ಕತ್ತರಿಸುವುದನ್ನು ತಡೆಗಟ್ಟಲು ಟೆಂಡರ್ ಶ್ಯೂರ್, ವೈಟ್ ಟಾಪಿಂಗ್ ಮತ್ತು ಇತರ ಕೆಲ ಯೋಜನೆಗಳಲ್ಲಿ ಬಿಬಿಎಂಪಿಯಿಂದಲೇ ಮೂಲಸೌಕರ್ಯ ಡಕ್ಟ್ ಸ್ಥಾಪಿಸಲಾಗುತ್ತದೆ. ಇಂತಹ ರಸ್ತೆಗಳಲ್ಲಿ ರಸ್ತೆ ಕತ್ತರಿಸುವ ಅನುಮತಿಯನ್ನು ಮೂಲಕ ನೀಡುವುದನ್ನು ಪ್ರತಿಬಂಧಿಸಿದೆ.

9.2. ಸದರಿ ಯೋಜನೆಗಳ ಉಸ್ತುವಾರಿ ಹೊಂದಿರುವ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿಯ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಪ್ರಸ್ತಾವನೆ ಸಲ್ಲಿಸಿ ಅಂತಹ ರಸ್ತೆಗಳನ್ನು ಜಿ.ಐ.ಎಸ್. ನಕ್ಷೆಯಲ್ಲಿ ಲಾಕ್ ಮಾಡುವ ಮೂಲಕ ಓ.ಎಫ್.ಸಿ. ಅಳವಡಿಕೆ ಪ್ರಕ್ರಿಯೆ ಜರುಗಿಸದಂತೆ ಪ್ರತಿಬಂಧಿಸುವುದು.

9.3. ಬಿಬಿಎಂಪಿಯಿಂದಲೇ ಮೂಲಸೌಕರ್ಯ ಡಕ್ಟ್ ಸ್ಥಾಪಿಸಲಾಗಿರುವ ರಸ್ತೆಗಳಲ್ಲಿ ಓ.ಎಫ್.ಸಿ ಸಂಸ್ಥೆಗಳಿಂದ ಭೌತಿಕವಾಗಿ ಮನವಿ ಪಡೆದುಕೊಂಡು ಡಿಮ್ಯಾಂಡ್ ನೋಟ್ ಜಾರಿಮಾಡಿ ನೇರವಾಗಿ ಮೂಲಸೌಕರ್ಯ ಡಕ್ಟ್‌ಗಳಲ್ಲಿ ಓ.ಎಫ್.ಸಿ. ಅಳವಡಿಸಲು ಓ.ಎಫ್.ಸಿ. ಕೋಶ ಅನುಮತಿ ನೀಡುವುದು.

9.4. ಬಿಬಿಎಂಪಿಯಿಂದಲೇ ಮೂಲಸೌಕರ್ಯ ಡಕ್ಟ್ ಸ್ಥಾಪಿಸಲಾಗಿರುವ ರಸ್ತೆಗಳನ್ನು ಕತ್ತರಿಸುವುದನ್ನು ನಿರ್ಬಂಧಿಸಿದೆ. ಓ.ಎಫ್.ಸಿ.ಯನ್ನು ನೇರವಾಗಿ ಡಕ್ಟ್‌ಗಳಲ್ಲಿ ಅಳವಡಿಸುವುದು.

9.5. ಓ.ಎಫ್.ಸಿ. ಡಕ್ಟ್ ಅಳವಡಿಕೆ ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಅಧಿಕಾರಿಗಳ ಮೇಲ್ವಿಚಾರಣೆ/ ಉಪಸ್ಥಿತಿಯಲ್ಲಿ ನಡೆಯತಕ್ಕದ್ದು.

* * * * * * * *

[illegible signature]
29/11/2019
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ...

OFC data

**Statement showing the detils of Service Providers wise, OFC permissions issued from the Year 18/6/2012 to Till Date**

| Sl No | Name of the Company | Details of permissions | | |
|---|---|---|---|---|
| | | Length(Km) | Amount in Rs | Amount in Lakhs |
| 1 | 2 | 3 | 4 | 5 |
| **I.Telecom** | | | | |
| 1 | BSNL | 60.433 | 51035790.00 | 510.36 |
| 2 | Reliance Jio Infocomm Limited with permission | 5521.760 | 5508696839 | 55086.97 |
| | Regularised in the year 2014-15,2016-17 & 2017-18 | 1115.520 | | |
| 3 | Reliance Communications Limited | 497.992 | 68657200.00 | 686.57 |
| 4 | Railtel Corporation of India | 33.49 | 28466500 | 284.665 |
| 5 | Bharti Airtel limited | 2872.738 | 2628739588 | 26287.40 |
| | Regularised in the year 2018-19 | 529.5035 | | |
| 6 | IDEA Cellular Limited | 199.253 | 178739293.00 | 1787.39 |
| 7 | Vodafone South Limited | 1219.33 | 1032243749.0000 | 10322.44 |
| 8 | Tata Teleservice Limited | 205.73 | 28355091.00 | 283.55 |
| 9 | Tata Communications Limited | 136.430 | 110266411 | 1102.66 |
| 10 | Aircel | 8.090 | 4854000.00 | 48.54 |
| 11 | Defence | 116.422 | 103016289.00 | 1030.16 |
| 12 | Rockline Telecommunication | 0.0 | 4969463.00 | 49.69 |
| | Regularised in the year 2019-20 | 5.053 | | |
| 13 | Dinesh Engineer Limited | 9.188 | 9272542.00 | 92.73 |
| | **Total** | **12530.927** | **9757312755** | **97573.13** |
| **II. Non-Telecom** | | | | |
| 14 | Sterilite Technology Ltd | 37.881 | 17340675.00 | 173.41 |
| 15 | 3G Telecom Infra India Pvt Ltd | 106.20 | 56715225.40 | 567.15 |
| | **Total** | **144.0780** | **74055900** | **740.56** |
| **III. Internet** | | | | |
| 16 | ACT | 860.498 | 475548665.0 | 4755.49 |
| | Regularised in the year 2017-18 | 555.527 | | |
| 17 | TATA SKY BROADBAND | 231.638 | 6796306.0 | |
| 18 | Lightstorm | 13.468 | 5683162.00 | 56.83 |
| | **Total** | **1661.131** | **488028133.00** | **4812.32** |
| **IV. Others** | | | | |
| 16 | BESCOM | 109.92 | 93947600 | |
| 17 | BMRCL | 7.317 | 5467750 | |
| 18 | ISRO | 0.950 | 712500 | |
| 19 | NAL | 0.04 | 75000 | |
| 20 | HAL | 0.029 | 24650 | |
| 21 | KPTCL | 41.003 | 42807684 | |
| 22 | Gail India | 39.18 | 38322550 | |
| 23 | Gail Gas | 446.599 | 537344514 | |
| 24 | BMTC | 1.685 | 926250 | |
| 25 | SDE Cable Construction | 0.40 | 150000 | |
| 26 | Garrison Engineer | 5.515 | 4287250 | |
| 27 | IRCON Internation Ltd | 0.120 | 102000 | |
| 28 | Mantri Developers | 1.48 | 1468750 | |
| 29 | BOSCH | 0.017 | 14450 | |
| 30 | Karle Infra Pvt Ltd | 0.697 | 1670186 | |
| 31 | Qualcomm India Pvt Ltd | 1.25 | 1062500 | |
| 32 | BDA Electrical | 0.800 | 680000 | |
| 33 | ESI | 3.900 | 3315000 | |
| 34 | Chalukya Holiday Resarts | 2.12 | 1802000 | |
| | **Total** | 663.028 | 734270634 | 0.0000 |
| | **Grand Total** | 14999.1635 | 11053667423 | |

**Total amount collected=Rs 1105.366Crs**

16/12/2024

OFC

**Statement showing the detils of Service Providers wise, OFC permissions issued from the Year 18/6/2012 to Till Date**

| Sl No | Name of the Company | Details of permissions | | |
|---|---|---|---|---|
| | | Length(Km) | Amount in Rs | Amount in Lakhs |
| 1 | 2 | 3 | 4 | 5 |
| **I.Telecom** | | | | |
| 1 | BSNL | 60.433 | 51035790.00 | 510.36 |
| 2 | Reliance Jio Infocomm Limited with permission | 5521.760 | 5508696839 | 55086.97 |
| | Regularised in the year 2014-15,2016-17 & 2017-18 | 1115.520 | | |
| 3 | Reliance Communications Limited | 497.992 | 68657200.00 | 686.57 |
| 4 | Railtel Corporation of India | 33.49 | 28466500 | 284.665 |
| 5 | Bharti Airtel limited | 2872.738 | 2628739588 | 26287.40 |
| | Regularised in the year 2018-19 | 529.5035 | | |
| 6 | IDEA Cellular Limited | 199.253 | 178739293.00 | 1787.39 |
| 7 | Vodafone South Limited | 1219.33 | 1032243749.0000 | 10322.44 |
| 8 | Tata Teleservice Limited | 205.73 | 28355091.00 | 283.55 |
| 9 | Tata Communications Limited | 136.430 | 110266411 | 1102.66 |
| 10 | Aircel | 8.090 | 4854000.00 | 48.54 |
| 11 | Defence | 116.422 | 103016289.00 | 1030.16 |
| 12 | Rockline Telecommunication | 0.0 | 4969463.00 | 49.69 |
| | Regularised in the year 2019-20 | 5.053 | | |
| 13 | Dinesh Engineer Limited | 9.188 | 9272542.00 | 92.73 |
| | **Total** | **12530.927** | **9757312755** | **97573.13** |
| **II. Non-Telecom** | | | | |
| 14 | Sterlite Technology Ltd | 37.881 | 17340675.00 | 173.41 |
| 15 | 3G Telecom Infra India Pvt Ltd | 106.20 | 56715225.40 | 567.15 |
| | **Total** | **144.0780** | **74055900** | **740.56** |
| **III. Internet** | | | | |
| 16 | ACT | 860.498 | 475548665.0 | 4755.49 |
| | Regularised in the year 2017-18 | 555.527 | | |
| 17 | TATA SKY BROADBAND | 231.638 | 6796306.0 | |
| 18 | Lightstorm | 13.468 | 5683162.00 | 56.83 |
| | **Total** | **1661.131** | **488028133.00** | **4812.32** |
| **IV. Others** | | | | |
| 16 | BESCOM | 109.92 | 93947600 | |
| 17 | BMRCL | 7.317 | 5467750 | |
| 18 | ISRO | 0.950 | 712500 | |
| 19 | NAL | 0.04 | 75000 | |
| 20 | HAL | 0.029 | 24650 | |
| 21 | KPTCL | 41.003 | 42897684 | |
| 22 | Gail India | 39.18 | 38322550 | |
| 23 | Gail Gas | 446.599 | 537344514 | |
| 24 | BMTC | 1.685 | 926250 | |
| 25 | SDE Cable Construction | 0.40 | 150000 | |
| 26 | Garrison Engineer | 5.515 | 4287250 | |
| 27 | IRCON Internation Ltd | 0.120 | 102000 | |
| 28 | Mantri Developers | 1.48 | 1468750 | |
| 29 | BOSCH | 0.017 | 14450 | |
| 30 | Karle Infra Pvt Ltd | 0.697 | 1670186 | |
| 31 | Qualcomm India Pvt Ltd | 1.25 | 1062500 | |
| 32 | BDA Electrical | 0.800 | 680000 | |
| 33 | ESI | 3.900 | 3315000 | |
| 34 | Chalukya Holiday Resarts | 2.12 | 1802000 | |
| | **Total** | 663.028 | 734270634 | 0.0000 |
| | **Grand Total** | **14999.1635** | **11053667423** | |

**Total amount collected=Rs 1105.366Crs**

16/12/2024